## ಕಂಬಳಿ ಹುಳದ 'ಮೈ' ವರ್ಣಿಕೆ

ಕರಾವಳಿಯಲ್ಲಿ ಬಡಗು ಮತ್ತು ತೆಂಕುತಿಟ್ಟಿನ ಯಕ್ಷಗಾನ ಪ್ರಸಿದ್ಧಿ ಪಡೆದಿವೆ. ಈ ತೆಂಕುತಿಟ್ಟಿನ ಯಕ್ಷಗಾನದ ಪಾತ್ರಧಾರಿಗಳು ಹಾಕಿಕೊಳ್ಳುವ ಮುಖವರ್ಣಿಕೆಯನ್ನು ಈ ಕಂಬಳಿಹುಳ ಹೋಲುತ್ತದೆ. ಪ್ರಕೃತಿಯ ಕಂಬಳಿ ಹುಳದ ಹೊರ ಮೈ ತುಂಬಾ, ಆಗಷ್ಟೇ ರಂಗ ಪ್ರವೇಶಕ್ಕೆ ತಯಾರಾಗಿ ನಿಂತ ಮುಖ ವರ್ಣಿಕೆಯಂತೆ ಹಲವು ನೋಟುಗಳು ಕಾಣಿಸಿಗುತ್ತವೆ. ಉತ್ತರ ಕನ್ನಡದ ಅರಬೈಲ್ ಘಟ್ಟದ ಕಾಡಿನಲ್ಲಿ ಈ ಕಂಬಳಿಹುಳದ ಹೆಜ್ಜೆ ಗುರುತು ಹಸಿರ ನಡುವೆ ಕಂಗೊಳಿಸಿದ ರೀತಿ ಇದು.

■ **ದತ್ತಾತ್ರೇಯ ಭಟ್ಟ, ಕಣ್ಣಿಪಾಲ**






## ಗಡಿಯಾರ ಗೋಪುರ

ಹಳೆ ದಾವಣಗೆರೆಯ ಮಂಡಿಪೇಟೆ ಬಳಿ ಇರುವ 75 ಅಡಿ ಎತ್ತರದ 10 ಅಡಿ ಚಚ್ಚೌಕ ಕಟ್ಟೆಯ ಮೇಲೆ ಚನ್ನಗಿರಿ ರಂಗಪ್ಪ ಗಡಿಯಾರ ಕಂಬವನ್ನು (ಗೋಪುರ) ಚನ್ನಗಿರಿ ರಂಗಪ್ಪ ಎಂಬುವರು 1961ರಲ್ಲಿ ನಿರ್ಮಿಸಿದರು. ಈ ಗಡಿಯಾರ 58 ವರ್ಷಗಳಿಂದ ಎಂದೂ ನಿಲ್ಲದೆ ಕಾಲಚಕ್ರವನ್ನು ಉರುಳಿಸುತ್ತಿದೆ. ಗಂಟೆಗೊಮ್ಮೆ 'ಢಣ್' ಎಂದು ಜೋರಾಗಿ ಶಬ್ದ ಮಾಡಿ ಸುತ್ತಮುತ್ತಲ ಜನರಿಗೆ 'ಸಮಯ ಪ್ರಜ್ಞೆ'ಯ ಬಗ್ಗೆ ಎಚ್ಚರಿಸುತ್ತಿದೆ. ಅಂದಿನ ಮೈಸೂರು ಪ್ರಾಂತ್ಯದ ದಿವಾನರಾಗಿದ್ದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರಿಂದ 23–2–1937ರಲ್ಲಿ ಶಿಲಾನ್ಯಾಸಗೊಂಡ ಈ ಗಡಿಯಾರ ಗೋಪುರವನ್ನು 26–11–1961 ರಂದು ಸಚಿವರಾಗಿದ್ದ ಟಿ. ಸುಬ್ರಹ್ಮಣ್ಯರಿಂದ ಚಾಲನೆಗೊಂಡಿತ್ತು.

■ **ಜಿ. ರಾಜಣ್ಣ, ದಾವಣಗೆರೆ**

## ಪ್ರೊಟೀನ್‌ಯುಕ್ತ ಹುಳಿ- ಬಿಂಬಲ

ಕರಾವಳಿಯ ಜನರ ಅಡುಗೆಯ ಸವಿಯಲ್ಲಿ ಬೆರೆತಿರುವ ಹುಳಿ ಬಿಂಬಲ. ಮರದ ಕಾಂಡ– ಬೊಡ್ಡೆಗೆ ತುಂಬಿಕೊಳ್ಳುವ ಈ ಸಣ್ಣ ಹುಳಿಕಾಯಿ ಪ್ರೊಟೀನ್‌ಯುಕ್ತ. ಕರಾವಳಿಯ ಜನಜೀವನದ ಹಾಸು ಹೊಕ್ಕಾಗಿರುವ ಈ 'ಹುಳಿ' ಮರಗಳು ಬಹುತೇಕರ ಮನೆಯ ಹಿತ್ತಲಲ್ಲಿ ಕಂಡು ಬರುತ್ತದೆ.

■ **ಚಂದ್ರಕಲಾ ಗಂಗೊಳ್ಳಿ**

